<u>**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**</u>

<u>**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**</u>

**MVC** 704/2024 **PW**- 1

<u>**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀಮತಿ ಎಸ ಆರ ಜಿ ರವರಿಂದ.**</u>

ನಮ್ಮ ವಾಹನ ಜೂನ್ 2022 ರಲ್ಲಿ ತಯಾರಾದ ವಾಹನ ಇರುತ್ತದೆ. ಸದರಿ ವಾಹನಕ್ಕೆ Iffco Tokyo ಕಂಪನಿಯಲ್ಲಿ ಇನ್ಶೂರನ್ಸ ಇದೆ. ಅಪಘಾತವಾದ ನಂತರ ನಿಮ್ಮ ವಿಮಾ ಕಂಪನಿಗೆ ನೀವು ಮಾಹಿತಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ತಿಳಿಸಿದ್ದೇವೆ ಎನ್ನುತ್ತಾರೆ. ನಿಮ್ಮ ವಿಮಾ ಕಂಪನಿಯಲ್ಲಿ ನಿಮ್ಮ ವಾಹನ ಜಖಂಗೊಂಡಿದ್ದರ ಬಗ್ಗೆ ನೀವು ವಿಮೆಯ ಹಣವನ್ನು ಕೇಳಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಶಾನೆ ಪಿ 11 ರ ಪ್ರಕಾರ ನಮ್ಮ ವಿಮಾ ಕಂಪನಿಯು ಷೋ ರೂಮ್ ನವರಿಗೆ ಹಣ ಪಾವತಿ ಮಾಡಿರುತ್ತಾರೆ. ಗಾಡಿ ಖರೀದಿ ಮಾಡುವ ಸಮಯದಲ್ಲಿ ನಿಮ್ಮ ಗಾಡಿಯ ಐಡಿವಿ ವ್ಯಾಲ್ಯು ಎಷ್ಟು ಇತ್ತು ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಈಗ ಎಷ್ಟು ಇತ್ತು ಎಂದರೆ ಸಾಕ್ಷಿ ಅದನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ. ನಾನು 2022 ರಲ್ಲಿ ಗಾಡಿ ಖರೀದಿ ಮಾಡಿದ್ದು ಪ್ರತಿ ವರ್ಷ ಶೇಕಡಾ 10 ರಷ್ಟು ಅದರ ವ್ಯಾಲ್ಯು ಕಡಿಮೆ ಆಗುತ್ತಾ ಹೋಗುತ್ತದೆ ಎಂದರೆ ಸರಿ. ಅಪಘಾತವಾದ ನಂತರ ಶೇಕಡಾ 20 ರಷ್ಟು ವ್ಯಾಲ್ಯು ಕಡಿಮೆ ಆಗುತ್ತದೆ ಎಂದರೆ ಸರಿ. ಅಪಘಾತವಾದ ನಂತರ ಸದರಿ ವಾಹನದ ರಿಪೇರಿ ಖರ್ಚು ಎಷ್ಟು ಆಗುತ್ತದೆ ಎಂಬ ಬಗ್ಗೆ ನೀವು ಪ್ರತ್ಯೇಕವಾಗಿ estimation ಹಾಕಿಸಿದ್ದೀರಾ ಎಂದರೆ ಸಾಕ್ಷಿ ಅಪಘಾತವಾದ ನಂತರ ನೇರವಾಗಿ ಷೋ ರೂಮ್ ನವರೆ ಗಾಡಿ ತೆಗೆದುಕೊಂಡು ಹೋಗಿದ್ದು ಅವರು ಸುಮಾರು 3 ಲಕ್ಷ ಚಿಲ್ಲರೇ ಖರ್ಚಾಗುತ್ತದೆ ಎಂದು ಹೇಳಿರುತ್ತಾರೆ. ಅಪಘಾತವಾದ ನಂತರ ನಿಮ್ಮ ವಾಹನವನ್ನು ಆರಟಿಓದವರು ಬಂದು ಪರಿಶೀಲನೆ ಮಾಡಿದ್ದರಾ ಇಲ್ಲವಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮೋಟಾರ ಬೈಕನ ವರದಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದರಲ್ಲಿ ಎನು ಇದೆ ಎಂದು ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ನಿಶಾನೆ ಪಿ 29 ರಲ್ಲಿ ನಮೂದಿಸಿರುವ ನನ್ನ ವಾಹನದ ಜಖಂಗಳಿಗೆ ಸಂಬಂಧಿಸಿದಂತೆ ಅದೇ ರೀತಿ ನಾನು ಖರ್ಚು ಮಾಡಿರುವ ರಿಪೇರಿಗೆ ಒಂದಕ್ಕೊಂದು ಹೊಂದಾಣಿಕೆ ಆಗುವುದಿಲ್ಲವೆಂದರೆ ಸಾಕ್ಷಿ ಅದು ಷೋ ರೂಮ್ ಗೆ ಹೋದಾಗಲೆ ಎನೇನು ಡ್ಯಾಮೇಜ್ ಆಗಿದೆ ಎಂದು ನಮಗೆ ಗೊತ್ತಾಗುತ್ತದೆ ಅದಕ್ಕಿಂತ ಮೊದಲು ಮೇಲೆ ಮೇಲೆ ಅಷ್ಟೆ ನೋಡಿ ವರದಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಿನಿಯರ್ ಆರಟಿಓದವರು ಗಾಡಿಯನ್ನು ಪರಿಶೀಲನೆ

ಮಾಡಿದ ನಂತರವೆ ವರದಿ ಕೊಡುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಷೋ ರೂಮ್ ನಲ್ಲಿ ಲೈಸನ್ಸ ಸರ್ವೆಯರನ್ನು ವಿಮಾ ಕಂಪನಿಯವರು ಕರೆಸಿ ಸರ್ವೆ ಮಾಡಿಸಿರುತ್ತಾರೆ. ಸರ್ವೆ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಷೋ ರೂಮ್ ನವರು ಸದರಿ ಗಾಡಿಗೆ ಎನೂ ಡ್ಯಾಮೇಜ್ ಆಗಿದೆ ಮತ್ತು ಅದರ ಖರ್ಚು ಇಷ್ಟು ಆಗುತ್ತದೆ ಎಂಬ ಬಗ್ಗೆ estimation ಕೊಡುತ್ತಾರೆ. ಇದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಟ್ಯಾಕ್ಸ ಇನವಾಯ್ಸು ಬಿಲ್ ಪೇ ಮಾಡಿದ್ದರ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಕಿದ್ದೀರಾ ಎಂದರೆ ಸಾಕ್ಷಿ ಹಾಕಿದ್ದೇನೆ ಎನ್ನುತ್ತಾರೆ. ನಾನು ನ್ಯಾಯಾಲಯಕ್ಕೆ ಟ್ಯಾಕ್ಸ ಇನವಾಯ್ಸು ಅಷ್ಟೆ ದಾಖಲು ಮಾಡಿದ್ದೇನೆ ಬಿಲ್ ಪೇ ಮಾಡಿದ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಇದು ಇಷ್ಟೆ ಕೊಟ್ಟಿದ್ದೇನೆ ಎನ್ನುತ್ತಾರೆ. ನಿಶಾನೆ ಪಿ 11 ಸರಿಯಾದ ಅಧಿಕಾರ ಇರುವಂತಹ ವ್ಯಕ್ತಿ ಕೊಟ್ಟಂತಹ ದಾಖಲೆ ಇಲ್ಲವೆಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ಸದರಿ ದಾಖಲೆ ಜಿಎಸಟಿ ಸಪೋರ್ಟ ಮಾಡಲ್ಲವೆಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಅದರೇ ಜಿಎಸಟಿ ಪೇ ಮಾಡಿದ್ದು ಇದೇ ಎನ್ನುತ್ತಾರೆ. ರಿಪೇರಿ ಆದ ನಂತರ ಕೂಪನ್ ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಇನವಾಯ್ಸನಲ್ಲಿ ಟಾಯರ ಕೂಡಾ ಬದಲಾವಣೆ ಆಗಿದೆ, ಅಪಘಾತದಲ್ಲಿ ಆಗಿರುವಂತಹ ಜಖಂಗಳು ಇರುವುದಿಲ್ಲ ಕೇವಲ ಇನ್ಶೂರನ್ಸ ಕ್ಲೇಮ್ ಗೋಸ್ಕರ ನಾನು ಬೇರೆ ಬೇರೆ ರಿಪೇರಿಗಳನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಅಪಘಾತದ ರಸ್ತೆ ಎಲ್ಲಿಯೂ ತಿರುವುಗಳು ಇಲ್ಲ ನೇರವಾಗಿ ಇದೇ ಎಂದರೆ ಸರಿ. ನನಗೆ ಎದುರುಗಡೆಯಿಂದ ಬರುತ್ತಿದ್ದಂತಹ ಕಾರ ಕಾಣಿಸುತ್ತಿತ್ತು ಎಂದರೆ ಸರಿ. ನಾನು ನನ್ನ ಗಾಡಿಯನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ಎದುರುಗಡೆ ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿರುತ್ತೇನೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನಾಗಿಯೇ ಜೋರಾಗಿ ಗಾಡಿಯನ್ನು ಚಾಲನೆ ಮಾಡಿಕೊಂಡು ಹೋಗಿ 2 ನೇ ಎದುರುದಾರರ ಗಾಡಿಗೆ ಡಿಕ್ಕಿ ಹೊಡೆದಿರುವ ಕಾರಣ 2 ನೇ ಎದುರುದಾರರು ನಮಗೆ ಪರಿಹಾರದ ಹಣ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಕೂಡಾ ಪೋಲೀಸ ಠಾಣೆಯಲ್ಲಿ ನಾನು ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಐಆರಡಿಎ ರೂಲ್ಸ ಪ್ರಕಾರ ಅಪಘಾತವಾದ ತಕ್ಷಣ ಲೈಸನ್ಸಡ್ ಸರ್ವೆಯರ ಕರೆಯಿಸಿ ವಾಹನದ ಜಖಂಗಳ ಬಗ್ಗೆ ಸರ್ವೆ ಮಾಡಿಸಬೇಕೆಂದು ಗೊತ್ತಿದೇಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈಗಾಗಲೇ ನಾನು ಜಖಂಗಳ ಬಗ್ಗೆ ಪರಿಹಾರ ಪಡೆದಿರುವ ಕಾರಣ 2 ನೇ ಎದುರುದಾರರು ಮತ್ತೆ ಪರಿಹಾರ ಕೊಡಲು ಅರ್ಹರಲ್ಲವೆಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. 1 ನೇ ಎದುರುದಾರರ ವಾಹನದ ಚಾಲಕನಿಗೆ ಯಾವುದೇ ರೀತಿಯ ಡಿಎಲ್ ಇಲ್ಲದ

ಕಾರಣ 2 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸರಿಯಲ್ಲ. ಆ ದಿನ ಸದರಿ ವಾಹನವನ್ನು ನಾನೇ ಚಾಲನೆ ಮಾಡುತ್ತಿದೇನು. ಸದರಿ ಅಂದರೆ ಎದುರುಗಡೆ ಬರುತ್ತಿದ್ದ



ವಾಹನದ ಚಾಲಕ ಹೆಸರು ಗುರುರಾಜ ಎಂ ಬಿ ಎಂಬುವುದಾಗಿತ್ತು. ನನಗೆ ಡಿಎಲ್ ಇರುವುದಿಲ್ಲ ಎಂದರೆ ಸರಿಯಲ್ಲ. ಡಿಎಲ್ ಇದೆ ಎನ್ನುತ್ತಾರೆ. ಸದರಿ ಅಪಘಾತ ರಸ್ತೆಯ ಮಧ್ಯ ಭಾಗದಲ್ಲಿ ಆಗಿದ್ದು ಆ ಕಾರಣಕ್ಕೆ ಎರಡು ವಾಹನಗಳ ನಿರ್ಲಕ್ಷ್ಯ ಕಾಣಿಸುತ್ತದೆ ಎಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(.ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ